## ಚಿತ್ತ ಕೆತ್ತಿದ ಚಿತ್ರ



**ಮಧುರಾಣಿ ಎಚ್.ಎಸ್.**

ಕಲೆ: ರೂಪಶ್ರೀ ಕೆ.ಎಸ್.

# ಆತ್ತೆಯಿಂದಾಗಿ ಹತ್ತಿರವಾದ ಮುತ್ತಿನಂಥ ಹೆಣ್ಣು

## ಗೃಹಭಂಗ ಕಾದಂಬರಿಯ ನಂಜಮ್ಮ



ಕಥೆಗಳನ್ನು ಓದಲು ಮೊದಲಿಡುವಾಗ ಅದರ ಯಾವುದೋ ಒಂದು ಭಾಗ ಅಂತರಂಗದಲ್ಲಿ ಒಂದು ಶಾಶ್ವತ ಜಾಗ ಮಾಡಿಕೊಂಡು ಬಿಡುವ ಸುಳಿವು ನಮಗೆ ಇರುವುದಿಲ್ಲ. ಕಥೆಯ ಪಾತ್ರಗಳು ನಿಜ ಜೀವನದಲ್ಲಿ ಬದುಕಿಗೆ ಎಷ್ಟು ಹತ್ತಿರವಾದರೆ ಎದೆಗಿಳಿಯುವ ಆಳ ಅಷ್ಟು ಹೆಚ್ಚಿರುತ್ತದೆ ಎನ್ನುವುದು ಸ್ವಾನುಭವ. ಸಾಕಷ್ಟು ವಿಮರ್ಶೆಗೊಳಪಟ್ಟಿರುವ ಎಸ್.ಎಲ್. ಭೈರಪ್ಪನವರ ಕಾದಂಬರಿಗಳ ಪಾತ್ರಗಳನ್ನು ಮತ್ತಷ್ಟು ಹೆಚ್ಚಿ ತುರಿದು ಕೆರೆದು ನೋಡುವ ಹಂಗಿಗೆ ಹೋಗದೆ ಇಷ್ಟ-ಕಷ್ಟಗಳನ್ನು ಮಾತ್ರ ತೆರೆದಿಡುವ ಸದವಕಾಶ ಇದು. ಅದರಲ್ಲೂ ನಂಜಮ್ಮನೆಂಬ ಈಕೆ, ನಾನು ಕಾದಂಬರಿ ಓದಿದ ದಿನದಿಂದ ಇಂದಿನವರೆಗೆ ನೆನೆದಾಗಲೆಲ್ಲ ಸದಾ ನನ್ನನ್ನು ಕಾಡುವ ಹೆಣ್ಣು.

'ಗೃಹಭಂಗ'ದ ನಂಜಮ್ಮನ ಪಾತ್ರದ ಹುಟ್ಟು ಬೆಳವಣಿಗೆ ಹಾಗೂ ಅಸ್ತಂಗತವಾಗುವ ಪರಿಯನ್ನು ಬೆರೆಗಿನಿಂದ ಅರಗಿಸಿಕೊಂಡವಳು ನಾನು. ಹಿತ್ತಿಲ ಬಾಗಿಲಿನ ಬಳಿ ಒದ್ದೆ ಸೀರೆಗಳನ್ನು ಹಿಂಡಿ ಹೆಗಲಿಗೇರಿಸಿಕೊಂಡು ಬಂದು ನಿಲ್ಲುವ ಕಟ್ಟುಮಸ್ತಾದ ಅಗಲ ಹಣೆಯ ಎಳೆಕನ್ಯೆಯು, ತವರಿನಲ್ಲಿದ್ದಾಗಲೇ ತನ್ನನ್ನು ನೋಡಲು ಬಂದ ಗಂಡನನ್ನು ದಿಟ್ಟಿಸಲಾಗದೆ ಬಂದ ಬಾಗಿಲಲ್ಲೇ ಹಿಂದಕ್ಕೆ ಓಡಿ ಹೋಗುವವಳು. ಅದನ್ನು ನಾಚಿಕೆ ಎಂಬಂತೆ ಬಿಂಬಿಸದಿರುವುದು ವೈಶಿಷ್ಟ್ಯ. ಆಕೆ ಕೇವಲ ಆಚರಣೆಯ ಭಾಗವಾಗಿ ಮಾತ್ರ ಗಂಡನ ಮುಖವನ್ನು ನೋಡದೆ ಓಡಿ ಹೋಗುತ್ತಾಳೆ. ನಂತರದಲ್ಲಿ ಅವನು ಹೊರಡುವಾಗ ಅಜ್ಜಿ ಕರೆದು ಅವನ ಕಾಲಿಗೆ ಬೀಳಿಸಿದಾಗ ಅದನ್ನೂ ಆಚರಣೆಯ ಒಂದು ಭಾಗವೆಂಬಂತೆ ಭಾವಾವೇಗವಿಲ್ಲದೆ ಮಾಡಿ ಮುಗಿಸುತ್ತಾಳೆ. ಅಚ್ಚ ತಿಳಿ ಹಸಿರಿನ ಪುಟ್ಟ ಹುಲ್ಲಿನ ಒಡಕಿನಂತೆ ಹುಟ್ಟಿಕೊಳ್ಳುವ ಈ ಪಾತ್ರ ನಂತರದಲ್ಲಿ ಬೃಹದಾಕಾರವಾಗುವುದು ಸೋಜಿಗ. ಅವಳೊಂದು ಅತಿಸೌಮ್ಯ ಹೆಣ್ಣಿನೊಳಗಿನ ಅತೀವ ಜೀವನಪ್ರೀತಿಗೆ ಪ್ರತೀಕವಾಗಿ ಕಾಣುವಳು.

ಕಂಠೀ ಜೋಯಿಸ ಹಾಗೂ ಚೆನ್ನಿಗರಾಯನ ಪಾತ್ರಗಳು ಎರಡು ವಿಪರೀತದ ವೈರುಧ್ಯಗಳು. ಕಂಠೀ ಜೋಯಿಸರ ಮಗಳಾಗಿ ಹಾಗೂ ಚೆನ್ನಿಗರಾಯನ ಹೆಂಡತಿಯಾಗಿ ಅವಳ ಬದುಕು ಸಾಗುವ ಸರಣಿ ದುರಂತಗಳ ದಾರಿ ಓದುಗರನ್ನು ಕೂತಲ್ಲೇ ಕರಗಿಸುವುದು. ಗಂಡರ ಗಂಡ ಕಂಠೀ ಜೋಯಿಸರ